**OS. No.14/2019**
**P.W-7**

**( ದಿನಾಂಕ.17-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** A.G.P ರವರಿಂದ

ದಾವಾ ಸ್ವತ್ತಿನ ಸರ್ವೇ ನಂಬರ 2 ರಲ್ಲಿ ಸರಕಾರಿ ಶಾಲೆ ಇದೆ ಎಂದರೆ ಸರಿ. ಪಂಚಾಯತಿ ಕಚೇರಿ ಮತ್ತು ಅಂಗನವಾಡಿ ಕೇಂದ್ರ ಅಲ್ಲದೆ ಇಸ್ಮಾಯಲ್ ಖಾಧರಿ ದರ್ಗಾ ಇದೆ ಎಂದರೆ ಸರಿ. ಅಲ್ಲದೆ ಒಂದು ಸಿಮೆಂಟ ರಸ್ತೆ ಇದೆ ಎಂದರೆ ಸರಿ. ಒಂದು ಸಿಮೆಂಟ ರಸ್ಸೆ ಇದೆ ಎಂದರೆ ಸರಿ. ಸದರಿ ರಸ್ತೆ ಸುಮಾರು 100 ಅಡಿ ಉದ್ದ ಹಾಗೂ ಅಗಲ 30 ಅಡಿ ಇರುತ್ತದೆ. ಸದರಿ ರಸ್ತೆ ಸಿಮೆಂಟನಿಂದ ಕೂಡಿದೆ. ಎರಡು ಗಾಡಿಗಳು ಒಮ್ಮೆಲೆ ಹೋಗುತ್ತವೆ. ಸದರಿ ರಸ್ತೆಯನ್ನು ಪಂಚಾಯತಿವರು ನಿರ್ಮಿಸಿರುತ್ತಾರೆ. ಸಾರ್ವಜನಿಕರು ಸದರಿ ರಸ್ತೆ ಮುಖಾಂತರ ಹೋಗುತ್ತಾರೆ ಎಂದರೆ ಸರಿ. ದಾವಾ ಸ್ವತ್ತು 1967-68 ನೇ ಸಾಲಿನ ಪಹಣಿಗಳ ಪ್ರಕಾರ ಸರಕಾರಿ ಸ್ವತ್ತು ಎಂದು ಬರೆದಿತ್ತಾರೆ ಎಂದರೆ ಸರಿ. ಅದೇ ರೀತಿ ಸರಕಾರಿ ದೇವಲು ಎಂದು ಬರೆದಿತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೇ ನಂಬರ 2 ಖಾಸಗಿ ಜಮೀನು ಅಲ್ಲ ಎಂದರೆ ಸರಿ. ದಾವಾ ಸ್ವತ್್ತ ಸರಕಾರ ದಾಖಲೆಗಳ ಪ್ರಕಾರ ಸರಕಾರದ್ದು ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವೆದು ನಮ್ಮ ಸಮಾಜದವರು ಪೂಜೆ ಮಾಡುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ನಮ್ಮ ಸಮಾಜದವರು ಸರಕಾರದಿಂದ ಖರೀದಿಸಿಲ್ಲ. ದಾವಾ ಸ್ವತ್ತಿನ ಪಹಿಣಗಳಲ್ಲಿ ಎಲ್ಲಿಯೂ ಕೂಡಾ ಕುರುಬ ಸಮಾಜದ ಸ್ವತ್ತು ಎಂದು ಬರೆದಿಲ್ಲ ಎಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KAKB210000902019/truecopy/order-10.pdf

**OS. No.14/2019**
**P.W-7**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**

This is a True Copy of the Court Records Online. Authenticated @ districts.ecourtsindia.com/cnr/KAKB210000902019/truecopy/order-10.pdf

www.ecourtsindia.com